ಇಂದು ದಿನಾಂಕಃ 11.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ ಡಿ ಟಿ ಟಿ ವಕೀಲರಿಂದಃ

ನಾನು 4 ನೇ ತರಗತಿಯವರೆಗೂ ಓದಿರುತ್ತೇನೆ. ನನ್ನ ಮದುವೆ 1987 ರಲ್ಲಿ ಆಗಿರುತ್ತದೆ. ಮದುವೆಯ ನಂತರ ನಾನು ಪ್ರತ್ಯೇಕವಾಗಿ ಜೀವನ ಮಾಡುತ್ತಿದ್ದೇನೆ ಎಂದರೆ ಸರಿ. ನನ್ನ ತಂದೆ ಅಡಿವೆಪ್ಪನವರಿಗೆ ಸರ್ವೆನಂ.33/2 ಹಾಗೂ 68, ಸರ್ವೆನಂ.411 ಹಾಗೂ ಮನೆಯ ಜಾಗ, ಸರ್ವೆನಂ.211, 1 ಎಕರೆ 9 ಗುಂಟೆ ಇದ್ದವು. ಇವುಗಳನ್ನು ಹೊರತುಪಡಿಸಿ ಬೇರೆ ಬೇರೆ ಯಾವ ಜಮೀನುಗಳು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ. ಸರ್ವೆನಂ.211, 1 ಎಕರೆ 9 ಗುಂಟೆ ಜಮೀನನ್ನು ನನ್ನ ದೊಡ್ಡಣ್ಣನಾದ ಫಕ್ಕೀರಪ್ಪ ಅಡಿವೆಪ್ಪ ಸಾಃಡಮ್ಮಳ್ಳಿ ಹಾಗೂ ನಾಗಪ್ಪ ಹನುಮಂತಪ್ಪ ದೊಡ್ಡಮನಿ ಇವರು ವಹಿವಾಟು ಮಾಡುತ್ತಿದ್ದಾರೆ.

2. ಸರ್ವೆನಂ.411 ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುತ್ತೇವೆ. ಬೆಟಕೇರೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಡಮ್ಮಳ್ಳಿಯಲ್ಲಿ ಇರುವ ಆಸ್ತಿಯನ್ನು ಮೊದಲು ನನ್ನ ತಂದೆಯವರು ವಹಿವಾಟು ಮಾಡುತ್ತಿದ್ದರು. ಸದರಿ ಆಸ್ತಿಯ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ಸದರಿ ಪಂಚಾಯತಿ ಆಸ್ತಿ ಸಂಖ್ಯೆ 420 ಎಂದರೆ ಸರಿ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ನಾನು ಸೇರಿಸಿರುವುದಿಲ್ಲ. ಇನ್ನುಳಿದ ಆಸ್ತಿಯಲ್ಲಿ ನಾನು, ನನ್ನ ಅಣ್ಣನಾದ ಹನುಮಂತಪ್ಪ, ಸರೋಜಮ್ಮ ಫಕ್ಕೀರಪ್ಪ, ಚೌಡಮ್ಮ ನಾಗಪ್ಪ ಮನೆಗಳನ್ನು ಕಟ್ಟಿಕೊಂಡು ವಾಸವಾಗಿರುತ್ತೇವೆ ಎಂದರೆ ಸರಿ. ಆ ರೀತಿ ಮನೆಗಳನ್ನು ನಾವು ಕಟ್ಟಿಕೊಂಡಿರುವುದು ಸದರಿ ಜಮೀನನ್ನು ಹಿಸ್ಸೆ ಮಾಡಿಕೊಂಡ ನಂತರ ಎಂದರೆ ಸಾಕ್ಷಿಯು ನಮ್ಮ ತಂದೆಯವರು ತೋರಿಸಿದ ಜಾಗದಲ್ಲಿ ನಾವು ತಮ್ಮ ತಮ್ಮ ಮನೆಗಳನ್ನು ಕಟ್ಟಿಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ. ಆ ರೀತಿ ಹಿಸ್ಸೆ ಪ್ರಕಾರ ನಮ್ಮ ಹೆಸರುಗಳನ್ನು ಗ್ರಾಮ ಪಂಚಾಯತಿ ದಾಖಲೆಗಳಲ್ಲಿ ದಾಖಲಾಗಿದ್ದು ಅವರವರ ಹೆಸರುಗಳಲ್ಲಿ ಖಾತೆಯಾಗಿರುತ್ತದೆ ಎಂದರೆ ಸರಿ. ಸದರಿ ಖಾತೆಯಂತೆ ಆಸ್ತಿ ಸಂಖ್ಯೆ 421 ರಲ್ಲಿ ಹನುಮಂತಪ್ಪ ಎಂಬುವವರು ಮನೆಯನ್ನು ಕಟ್ಟಿಕೊಂಡು ಇರುತ್ತಾರೆ ಎಂದರೆ ಸರಿ. ಪಂಚಾಯತಿ ಆಸ್ತಿ ಸಂಖ್ಯೆ 421/1 ರಲ್ಲಿ ಸರೋಜಮ್ಮ ಪಕ್ಕಿರಪ್ಪ ರವರು ಮನೆಕಟ್ಟಿಕೊಂಡಿರುತ್ತಾರೆ ಎಂದರೆ ಸರಿ. ಪಂಚಾಯತಿ ಆಸ್ತಿ ಸಂಖ್ಯೆ 484 ರಲ್ಲಿ ಚೌಡಮ್ಮ ನಾಗಪ್ಪ ದೊಡ್ಡಮನಿ ರವರು ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿ. ಪಂಚಾಯತಿ ಆಸ್ತಿ420 ರಲ್ಲಿ ನಾನು ಮನೆಕಟ್ಟಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ಆಸ್ತಿಗಳನ್ನು ನಾವು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಆ ರೀತಿ ದಾವೆಯಲ್ಲಿ ಸೇರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ.

3. ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ಈಗಾಗಲೇ ನಮ್ಮ ಮತ್ತು ಪ್ರತಿವಾದಿಯರವರ ನಡುವೆ ಹಿಸ್ಸೆ ಆಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆನಂ.68/3, 2 ಎಕರೆ ಜಮೀನನ್ನು ನಾನೇ ವಹಿವಾಟು ಮಾಡುತ್ತಿದ್ದೇನೆ ಎಂದರೆ ಸರಿ. ಸರ್ವೆನಂ. 68/2 ರ, 2 ಎಕರೆ ಜಮೀನನ್ನು ನನ್ನ ದೊಡ್ಡಣ್ಣ ಹನಮಂತಪ್ಪ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿ. ಸರ್ವೆನಂ.133/ಪಿ2 ಆಸ್ತಿಯನ್ನು ಫಕ್ಕೀರಪ್ಪ ಅಡಿವೆಪ್ಪ ರವರು ವಹಿವಾಟು ಮಾಡುತ್ತಿದ್ದಾರೆ. ಸದರಿ ಆಸ್ತಿಯನ್ನು ನನ್ನ ತಂದೆ ಸ್ವಂತ ಖರೀದಿ ಹಿಡಿದಿರುತ್ತಾರೆ. ಸದರಿ ಆಸ್ತಿಯನ್ನು ಬಸಲಿಂಗಪ್ಪ ರವರಿಂದ ಖರೀದಿ ಹಿಡಿದಿರುತ್ತಾರೆ. ನನ್ನ ತಂದೆ ಅಡಿವೆಪ್ಪ ರವರು ಪ್ರತಿವಾದಿ 1 ರವರೊಂದಿಗೆ ವಾಸವಾಗಿದ್ದರು ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿಯ ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.